**<u>1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>**

<u>ಸಿ.ಸಿ. ಸಂಖ್ಯೆ: **1046/2025**</u>

<u>ಪಿರ್ಯಾದಿ</u> : ಹೆಚ್.ಎಂ.ಪೂರ್ಣೇಶ್,
ವಯಸ್ಸು ಸುಮಾರು 50 ವರ್ಷ,
ಬಿನ್ ಮಂಜಪ್ಪ, ವಾಸಃ ಹೆಗ್ಗುಡ್ಲು ಗ್ರಾಮ
ಮತ್ತು ಅಂಚೆ, ಬಣಕಲ್ ಹೋಬಳಿ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

<u>ಆರೋಪಿ</u> : ಅವಿನಾಶ್ ಡಿಸೌಜ,
ವಯಸ್ಸು ಸುಮಾರು 40 ವರ್ಷ,
ಬಿನ್ ಮಾರ್ಕ್ ಲಿಯೋ ಡಿಸೌಜ,
ವಾಸಃ ದಾಸರಹಳ್ಳಿ ಗ್ರಾಮ,
ಬಣಕಲ್ ಅಂಚೆ,
ಮೂಡಿಗೆರೆ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

<u>ಆಪಾದನೆಯ ಸಾರಾಂಶ</u>

ಶ್ರೀಮತಿ ಸುರಕ್ಷ ಕೆ.ಕೆ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಪಿರ್ಯಾದುದಾರರನ್ನು ಸಂಪರ್ಕಿಸಿ, ನಿಮ್ಮ ತುರ್ತು ಹಣದ ಅವಶ್ಯಕತೆಗಳಿಗಾಗಿ ಅವರಿಂದ ದಿನಾಂಕ 10.04.2024 ರಂದು 45,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಬಣಕಲ್ ಶಾಖೆಯ ಚೆಕ್ ಸಂಖ್ಯೆ: 927865, ದಿನಾಂಕ 25.03.2025, ರೂ.45,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸದರಿ ಬ್ಯಾಂಕ್‌ನಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿರುವುದಿಲ್ಲ (Funds insufficient) ಎಂದು ಹಿಂಬರಹ ನೀಡಿರುತ್ತಾರೆ. ಕಾರಣ, ಫಿರ್ಯಾದಿಯು ದಿನಾಂಕ 16.04.2025 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ

ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ?

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

*(*ದಿನಾಂಕ 07.01.2026 ರಂದು ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ*,* ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು*.* ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ*)*

**Sd/-**

ಮೂಡಿಗೆರೆ
ದಿನಾಂಕಃ 07.01.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಮೂಡಿಗೆರೆ.